ದಿನಾಂಕಃ 09.06.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಬಿ.ಜೆ. ವಕೀಲರಿಂದ:**

1. ಮೃತ ಸುಬ್ಬರಾಯಚಾರಿ ನನ್ನ ಅಣ್ಣ.

2. ರತ್ನಮ್ಮ ರವರು ಸುಬ್ಬರಾಯಚಾರಿರವರ ಮೊದಲನೇ ಹೆಂಡತಿ ಎಂದರೆ ಸರಿ. ರತ್ನಮ್ಮ ರವರಿಗೆ ಮೂರು ಜನ ಮಕ್ಕಳು.

3. ಸುಬ್ಬರಾಯಚಾರಿರವರಿಗೆ ದಾವಾ ಆಸ್ತಿ ವಿಭಜನೆ ಮೂಲಕ ಬಂದಿರುತ್ತದೆ. ಸದರಿ ವಿಭಜನೆ ಸುಬ್ಬರಾಯಚಾರಿ ಮತ್ತು ರಾಮಚಂದ್ರರವರ ನಡುವೆ ಆಗಿರುತ್ತದೆ.

4. ಸ.ನಂ.13 ಐಟಂ.ನಂ.2 ರ ಜಮೀನು ನನ್ನ ಭಾಗಕ್ಕೆ ಬಂದಿತ್ತು. ಸದರಿ ಜಮೀನು ಸುಬ್ಬರಾಯಚಾರಿ ರವರ ಹೆಸರನಲ್ಲಿ ಇತ್ತು. ಅವರಿಂದ ಯಾರಿಗೂ ಆಗಿಲ್ಲ.

5. ವಾದಿಗೆ ಸುಬ್ಬರಾಯಚಾರಿರವರು ಮರಣ ಹೊಂದಿದಾಗ ಸುಮಾರು 12 ವರ್ಷ ಇರಬಹುದು.

6. ನೀವು ಮತ್ತು 1 ನೇ ಪ್ರತಿವಾದಿಯವರು ಸೇರಿಕೊಂಡು ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂದು ದಾವ ಆಸ್ತಿಗಳನ್ನು 1 ನೇ ಪ್ರತಿವಾದಿ ಹೆಸರಿಗೆ ಮಾಡಿಸಿರುತ್ತೀರಿ ಎಂದರೆ ಸರಿಯಲ್ಲ.

7. ವಾದಿಗೆ ದಾವ ಆಸ್ತಿಗಳಲ್ಲಿ ಸಮಭಾಗ ಇದೆ ಎಂದರೆ ಸರಿ.

8. ನಾನು ವಿಭಾಗಕ್ಕಾಗಿ ಯಾವುದೇ ದಾವೆಯನ್ನು ಹೂಡಿಲ್ಲ.

9. ದಾವ ಐಟಂ.ನಂ.2 ರಲ್ಲೂ ಸಹಾ ವಾದಿಗೆ ಅರ್ಧ ಭಾಗದ ಹಕ್ಕಿದೆ ಎಂದರೆ ಸರಿಯಲ್ಲ.

10. 1 ನೇ ಪ್ರತಿವಾದಿಯೊಂದಿಗೆ ಸೇರಿಕೊಂಡು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಕೆ.ಎಂ.ಪಿ. ವಕೀಲರಿಂದಃ**

1. ನನ್ನ ಮದುವೆ ದಿ.04.06.1979 ರಂದು ಆಗಿದೆ. ನನ್ನ ಜನ್ಮ ದಿನಾಂಕ ನನಗೆ ನೆನಪಿಲ್ಲ.

2. ಮದುವೆಯಾದ ನಂತರ ಚಿಕ್ಕಮಗಳೂರಿನಲ್ಲಿ ನಿಮ್ಮ ಗಂಡನ ಮನೆಯಲ್ಲಿ ವಾಸವಿದ್ದೀರ ಎಂದರೆ ಸರಿ.

3. ನೀವು ವಾದಿಯವರಿಗೆ ಅನುಕೂಲವಾಗಲಿ ಎಂದು ಯಾವುದೇ ಪ್ರತಿ ಹಕ್ಕನ್ನು ಸಲ್ಲಿಸದೇ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ.

4. ನೀವು ಹೇಳುವಂತೆ ವಿಭಾಗವಾಗಿಲ್ಲದಿದ್ದರೂ ಮತ್ತು 1 ನೇ ಪ್ರತಿವಾದಿಯ ಬಳಿ ಯಾವುದೇ ಮೂಲ ವಿಭಾಗ ಪತ್ರ ಇಲ್ಲದಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ. ನಾನು ಹೇಳುವ ವಿಭಾಗಪತ್ರ ಯಾವುದೇ ನೋಂದಣಿಯಾಗಿಲ್ಲ.

5. ವಾದಿ ಮತ್ತು ಪ್ರತಿವಾದಿಗಳು ಹಾಗೂ ನೀವು ಒಂದೇ ಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ.

6. ಜಿ.ಎಂ. ಸುಬ್ಬರಾಯಚಾರಿ ರವರ ಆಸ್ತಿಯಲ್ಲಿ ಯಾವುದೇ ರೀತಿಯ ಹಕ್ಕಿಲ್ಲದೇ ಇದ್ದರೂ ಸಹಾ ವಾದಿಯವರ ಮಾತು ಕೇಳಿ ನೀವು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರ ಎಂದರೆ ಸರಿಯಲ್ಲ.

7. ಪಂಚಾಯಿತುದಾರರ ಸಮಕ್ಷಮ ದಾವ ಐಟಂ.ನಂ.2 ನೇ ಸ್ವತ್ತನ್ನು ನಿಮಗೆ ಸುಬ್ಬರಾಯಚಾರಿರವರು ನೀಡಿಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರ ಎಂದರೆ ಸರಿಯಲ್ಲ.

8. ದಾವ ಆಸ್ತಿಗಳಲ್ಲಿ ನಿಮಗೆ ಹಿಸ್ಸಾ ಹಕ್ಕು ಇಲ್ಲದೇ ಇದ್ದರೂ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.